

# ಪದಕ ಗೆಲ್ಲದಿದ್ದರೂ ಇವರು ಚಿನ್ನವೇ...

■ ಪ್ರಮೋದ ಕುಲಕರ್ಣಿ

**ಒಲಿಂಪಿಕ್ಸ್‌ನಲ್ಲಿ ಕ್ರೀಡಾಪಟುವಾಗಿ ವಿನೇಶ್ ಫೋಗಟ್‌ಗೆ ಪದಕ ಕೈ ತಪ್ಪಿರಬಹುದು. ಪದಕದ ಹೊಸ್ತಿಲಲ್ಲಿ ಲಕ್ಷ್ಯ ಸೇನ್ ನಿರಾಸೆ ಅನುಭವಿಸಿರಬಹುದು. ಆದರೆ ಇವರ ಹೋರಾಟದ ಛಲ, ಛಾಪು, ಆಟದ ಕೌಶಲ ಭಾರತದ ಕ್ರೀಡಾಪ್ರೇಮಿಗಳ ಹೃದಯದಲ್ಲಿ ಇವರು ಚಿನ್ನದಂತೆ ಹೊಳೆಯುವಂತೆ ಮಾಡಿರುವುದರಲ್ಲಿ ಎರಡು ಮಾತಿಲ್ಲ. ಆದರೂ ಹೋರಾಟದ ನಂತರ ಅವರು ಕುಸ್ತಿಗೇ ವಿದಾಯ ಹೇಳಿರುವುದು ಮನಸ್ಸನ್ನು ಭಾರವಾಗಿಸಿದೆ.**

ಭಾರತದ ಕೋಟ್ಯಂತರ ಕ್ರೀಡಾಪ್ರೇಮಿಗಳು 2024, ಆಗಸ್ಟ್ 7ರ ದಿನವನ್ನು ಬಹುಶಃ ಜೀವಮಾನದಲ್ಲಿ ಮರೆಯಲು ಸಾಧ್ಯವೇ ಇಲ್ಲವೇನೋ? ಒಲಿಂಪಿಕ್ಸ್‌ನ ಮಹಿಳಾ ಕುಸ್ತಿಯಲ್ಲಿ ಇತಿಹಾಸ ನಿರ್ಮಾಣವಾಗುತ್ತದೆ, ವಿನೇಶ್ ಫೋಗಟ್ ಚಿನ್ನ ಅಥವಾ ಬೆಳ್ಳಿ ಪದಕ ಗೆದ್ದು ದಾಖಲೆ ಬರೆಯುತ್ತಾರೆ ಎನ್ನುವ ಕನಸು ಅರಳಿದ್ದ ದಿನವದು.

ಆ ಸಂಭ್ರಮಕ್ಕಾಗಿ, ಖುಷಿಯ ಕ್ಷಣಕ್ಕಾಗಿ, ಸೋತರೂ ಬೆಳ್ಳಿ ಪದಕವಂತೂ ನಿಶ್ಚಿತ ಎನ್ನುವ ಸಡಗರಕ್ಕಾಗಿ ಕಾದಿದ್ದ ದಿನ ಎದುರಾದ ಮರ್ಮಾಘಾತ ಅಕ್ಷರಗಳಲ್ಲಿ ಕಟ್ಟಿಕೊಡುವುದು ಕಷ್ಟವೇ.

ನಿಗದಿಗಿಂತಲೂ 100ಗ್ರಾಂ ಹೆಚ್ಚು ತೂಕ ಹೊಂದಿರುವ ಕಾರಣಕ್ಕಾಗಿ ವಿನೇಶ್ ಅವರನ್ನು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕುಸ್ತಿ ಸ್ಪರ್ಧೆಯಿಂದ ಅನರ್ಹ ಮಾಡಲಾಗಿತ್ತು. ಈ ಸುದ್ದಿ ಕಾಡ್ಗಿಚ್ಚಿನ ಹಾಗೆ ಕೆಲವೇ ಸಮಯದಲ್ಲಿ ಹರಡಿದಾಗ ಭಾರತೀಯ ಕ್ರೀಡಾಪ್ರೇಮಿಗಳ ಹೃದಯ ನುಚ್ಚುನೂರಾಗಿತ್ತು. ಒಂದು ಕ್ಷಣ ಎದೆಬಡಿತವೇ ನಿಂತುಹೋದ ಅನುಭವ. ದೂರದ ದೇಶದಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನ ದೃಶ್ಯಾವಳಿಗಳನ್ನು ನೋಡುತ್ತಿದ್ದವರಿಗೆ ಅನರ್ಹತೆಯ ಸುದ್ದಿ, ಹಳ್ಳಿಯಲ್ಲಿದ್ದುಕೊಂಡು ಕುಸ್ತಿಯಲ್ಲಿ ಸಾಧನೆಯ ಕನಸು ಹೊತ್ತ ಯುವ ಪೈಲ್ವಾನ್‌ರ ಜಂಘಾಬಲವನ್ನೇ ಕುಗ್ಗಿಸುವಂತೆ ಮಾಡಿತ್ತು.

29 ವರ್ಷದ ಹರಿಯಾಣದ ವಿನೇಶ್ ಫೋಗಟ್ ಅವರಿಗಿದು ಮೂರನೇ ಒಲಿಂಪಿಕ್ಸ್. 2016ರ ರಿಯೊ ಡಿ ಜನೈರೊ, 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿದ್ದರು. ಈ ಹಿಂದಿನ ಎರಡೂ ಸ್ಪರ್ಧೆಗಳಿಗಿಂತ ಈ ಬಾರಿಯ ಸ್ಪರ್ಧೆ ವಿಶೇಷವಾಗಿತ್ತು, ಪ್ರತಿಷ್ಠೆಯ ಅಖಾಡವೂ ಆಗಿತ್ತು.

ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ 50 ಕೆ.ಜಿ. ವಿಭಾಗದಲ್ಲಿ ಸ್ಪರ್ಧೆ ಮಾಡಿದ್ದ ಅವರು ಭಾರತೀಯ ಕುಸ್ತಿ ಫೆಡರೇಷನ್‌ನ ಆಡಳಿತಾತ್ಮಕ ಅವ್ಯವಸ್ಥೆ, ಅಲ್ಲಿನ ಅಧ್ಯಕ್ಷರಾಗಿದ್ದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧದ 'ಕುಸ್ತಿ'ಯಲ್ಲಿ ವಿನೇಶ್ ಮುಂಚೂಣಿಯಲ್ಲಿದ್ದರು. ದೇಶದಲ್ಲಿನ ಕ್ರೀಡಾ ವ್ಯವಸ್ಥೆಯ ಲೋಪದೋಷಗಳ ನಡುವೆಯೂ ಪ್ಯಾರಿಸ್‌ನಲ್ಲಿ ಕೆಚ್ಚೆದೆಯ ಪ್ರದರ್ಶನ ನೀಡಿ ಒಲಿಂಪಿಕ್ಸ್‌ನ ಕುಸ್ತಿಯಲ್ಲಿ ಫೈನಲ್ ಪ್ರವೇಶಿಸಿದ್ದ ಭಾರತದ ಮೊದಲ ಮಹಿಳಾ ಕುಸ್ತಿಪಟು ಎನ್ನುವ ಚಾರಿತ್ರಿಕ ದಾಖಲೆ ಹೊಂದಿದ್ದರು. ಹೀಗಾಗಿ ಪ್ಯಾರಿಸ್‌ನಲ್ಲಿ ಅವರು ಪದಕ ಗೆಲ್ಲುವ ಕ್ಷಣಗಳನ್ನು ಕಣ್ತುಂಬಿಕೊಳ್ಳುವ ಅಪೂರ್ವ ಕ್ಷಣಗಳಿಗಾಗಿ ಕೋಟ್ಯಂತರ ಜನ ಕಾದು ಕುಳಿತಿದ್ದರು. ಆದರೆ ಅನರ್ಹತೆ ಪಟ್ಟ ಹೊತ್ತು ಬರಿಗೈಲಿ ಮರಳಬೇಕಾಯಿತು.

ಜಗತ್ತಿನ ಸರ್ವಶ್ರೇಷ್ಠ ಕ್ರೀಡಾಕೂಟ ಒಲಿಂಪಿಕ್ಸ್‌ನ ಕುಸ್ತಿಯಲ್ಲಿ 100 ಗ್ರಾಂ ತೂಕದ ಸಲುವಾಗಿ ಪದಕ ಕೈ ಚೆಲ್ಲುವ ಸಂದರ್ಭ ಬಂದಾಗ ಅರಗಿಸಿಕೊಳ್ಳುವುದು ಕ್ಲಿಷ್ಟಕರವೇ. ಕ್ರೀಡಾಪ್ರೇಮಿಗಳು ವಿನೇಶ್ ಬೆಂಬಲಕ್ಕೆ ನಿಂತರು. ಪದಕ ಗೆಲ್ಲದಿದ್ದರೂ ನೀನು ಚಿನ್ನವೇ ಎಂದು ಹುರಿದುಂಬಿಸಿದ್ದು ಯಾಕೆ ಗೊತ್ತೇ?

ಕುಸ್ತಿ ಫೆಡರೇಷನ್ ವಿರುದ್ಧದ ಹೋರಾಟ ಒಂದೆಡೆಯಾದರೆ, ವಿನೇಶ್ ಫೋಗಟ್ ವಿಶ್ವ ಚಾಂಪಿಯನ್‌ಷಿಪ್, ಏಷ್ಯನ್ ಕ್ರೀಡಾಕೂಟ, ಕಾಮನ್‌ವೆಲ್ತ್ ಕ್ರೀಡಾಕೂಟ, ಏಷ್ಯನ್ ಚಾಂಪಿಯನ್‌ಷಿಪ್‌ನಂಥ ಪ್ರತಿಷ್ಠಿತ ಕ್ರೀಡಾವೇದಿಕೆಗಳಲ್ಲಿ 15 ಪದಕಗಳನ್ನು ಜಯಿಸಿದ್ದಾರೆ. ಇದರಲ್ಲಿ ಚಿನ್ನದ ಪದಕಗಳ ಸಂಖ್ಯೆ ಐದು. ಏಷ್ಯನ್ ಹಾಗೂ ಕಾಮನ್‌ವೆಲ್ತ್ ಈ ಎರಡೂ ಕ್ರೀಡಾಕೂಟಗಳ ಕುಸ್ತಿಯಲ್ಲಿ ಚಿನ್ನ ಗೆದ್ದ ದೇಶದ ಮೊದಲ ಮಹಿಳೆ, ಒಲಿಂಪಿಕ್ಸ್‌ನ ಕುಸ್ತಿಯಲ್ಲಿ ಚಿನ್ನ ಗೆದ್ದ ಕುಸ್ತಿಪಟುವನ್ನೇ ಸೋಲಿಸಿದ ಮೊದಲ ಆಟಗಾರ್ತಿ ಎನ್ನುವ ದಾಖಲೆಯನ್ನೂ ಹೊಂದಿದ್ದಾರೆ. 2020ರ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದ ಜಪಾನ್‌ನ ಯುಯಿ ಸುಸಾಕಿ ಅವರನ್ನು ಚಿತ್ ಮಾಡಿದ್ದರು. ಆದ್ದರಿಂದ ವಿನೇಶ್ ಮೇಲೆ